**DETAILS OF SECOND YEAR PUC SUPPLEMENTARY FEES / WITHDRAWAL OF RESULT OF MARCH 2020 EXAMINATION**

Students are requested to pay the Supplementary fees and for Withdrawal of Result at the college office cash counter on producing your college ID card and four passport size photos (colour).

Kindy note the date & timings:

| | |
|---|---|
| Names starting from alphabets from A to N | 23rd July, 2020 from 9 AM to 12.30 PM. |
| Names starting from alphabets from P to Z | 24th July, 2020 from 9 AM to 12.30 PM |

**STRICTLY FOLLOW YOUR SLOT.** Please share your name & contact numbers with your mentors.

FEES FOR SUPPLEMENTARY EXAMINATIONS

| | |
|---|---|
| 1 subject | Rs.140/- |
| 2 subjects | Rs.270/- |
| 3 subjects & more | Rs. 400/- |
| Marks Card Fees | Rs. 50/- (Compulsory) |

FEES FOR WITHDRAWAL OF RESULTS

| | |
|---|---|
| Per subject for first time withdrawal | Rs. 175/- |
| Per subject for second & final withdrawal | Rs. 350/- |

Kindly submit the following documents for withdrawal of result at the time of fee payment.

- Four passport size photos
- ID card
- Duplicate copy of marks card (specimen copy of marks card is available at stationery shops)
- A declaration on a stamp paper stating that you are withdrawing the subjects and you have not received a Transfer Certificate from the college (The application form is given by the college office)

Students should come personally to fill in the OMR sheets when informed by the college office.

A helpline number is set up for all queries regarding second year PUC results of 2019-2020.
Helpline number - 080 23083900.

Apply online to obtain scanned copies of answer scripts/ revaluation/ retotalling

Department website - Pue.kar.nic.in.
Click on the link and follow the Calendar of Events
A copy of the circular pertaining to scanned copies of answer scripts/ re-evaluation/ re-totaling is posted for your reference.

Students who have failed, and are applying for Revaluation & Retotalling should pay the Supplementary fees on 23rd July, 2020.
All details regarding the above is available in the Department website - Pue.kar.nic.in

Students applying for scanned copy of answer scripts can apply for Revaluation/ Retotalling.
Whereas, students applying only for Revaluation need not apply for Retotalling.
Applications for the above should not be sent by Post/ Courier/in Person/ any other sources.
Prescribed fees can be paid online through Bengaluru One, Karnataka One, any branches of Corporation Bank (Union Bank of India) & Vijaya Bank (Bank of Baroda).

DETAILS OF FEES

| | |
|---|---|
| For Scanned copy (per subject) | Rs.530/- |
| For Revaluation (per subject) | Rs.1670/- |

Please note: No fees is prescribed for retotalling

DATES FOR PAYMENT OF FEES

| | |
|---|---|
| For Scanned Copy | 16.07.2020 to 30.07.2020 |
| To download Scanned copy | 03.08.2020 to 07.08.2020 |
| Submission of applications for Revaluation & Retotalling (Only applicable to students who have applied for scanned copies) | 04.08.2020 to 10.08.2020 |

The results published after revaluation are final.

Second year PUC supplementary examinations will be held during the last week of August 2020 or the first week of September 2020.
The time table for the above will be published by the Pre-university Board in the coming days.

ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು

ಸಂಖ್ಯೆ: ಪಪೂಶಿಇ/ಪರೀಕ್ಷೆ/SC.RV.RT/92/2019-20 ದಿನಾಂಕ:14.07.2020

## ಸು ತ್ತೋ ಲೆ

**ವಿಷಯ:** ಮಾರ್ಚ್ 2020ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಮೌಲ್ಯಮಾಪನಗೊಂಡ ಉತ್ತರ ಪತ್ರಿಕೆಗಳ Scanned ಪ್ರತಿ ಪಡೆಯಲು, ಮರುಮೌಲ್ಯಮಾಪನ ಮತ್ತು ಮರುಎಣಿಕೆಗಾಗಿ ಅರ್ಜಿ ಸಲ್ಲಿಸುವ ಬಗ್ಗೆ.

* * * *

'ಕರ್ನಾಟಕ ಪ್ರೀ ಯೂನಿವರ್ಸಿಟಿ ಕೋರ್ಸ್ ಸ್ಟೇಟ್ ಲೆವೆಲ್ ಪರೀಕ್ಷೆ ನಿಯಮಾವಳಿ 1997'ರ ನಿಯಮ 29(1) ಹಾಗೂ 30(1)ರ ಪ್ರಕಾರ ದ್ವಿತೀಯ ಪಿಯುಸಿ ಪರೀಕ್ಷೆಯ ಉತ್ತರ ಪತ್ರಿಕೆಗಳ Scanned ಪ್ರತಿ ಪಡೆಯಲು, ಮರುಎಣಿಕೆ ಹಾಗೂ ಮರುಮೌಲ್ಯಮಾಪನಕ್ಕಾಗಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಹಾಜರಾದ ವಿದ್ಯಾರ್ಥಿಗಳು **online** ನಲ್ಲಿ ಮಾತ್ರ ತಮ್ಮ ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡಲಾಗಿದೆ.

### ವಿದ್ಯಾರ್ಥಿಗಳಿಗೆ ವಿಶೇಷ ಸೂಚನೆಗಳು:

1. ವಿದ್ಯಾರ್ಥಿಗಳು ಉತ್ತರಪತ್ರಿಕೆಯ Scanned Copyಗೆ ಅರ್ಜಿ ಸಲ್ಲಿಸಿದ / ಪಡೆದ ವಿಷಯಗಳಿಗೆ ಮಾತ್ರ ನಂತರದಲ್ಲಿ Re-valuation / Re-totalling ಗಾಗಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ ಹಾಗೂ Revaluation ಗೆ ಅರ್ಜಿ ಸಲ್ಲಿಸಿರುವ ವಿಷಯಗಳಿಗೆ Re-totalling ಗೆ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.
2. **ಅಂಚೆ, ಕೊರಿಯರ್, ಮುದ್ದಾಂ ಮತ್ತು ಇತರ ಯಾವುದೇ ವಿಧಾನಗಳಲ್ಲಿ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.**
3. ನಿಗದಿಪಡಿಸಲಾಗಿರುವ ಶುಲ್ಕವನ್ನು online ಮೂಲಕ **BENGALURU-ONE, KARNATAKA-ONE, CORPORATION BANK(UNION BANK OF INDIA)** ಹಾಗೂ **VIJAYA BANK(BANK OF BARODA)** ಗಳ ಯಾವುದೇ ಶಾಖೆಯ ಮೂಲಕ ಪಾವತಿ ಮಾಡಲು ಮಾತ್ರ ಅವಕಾಶವಿರುತ್ತದೆ.
4. ಸರ್ಕಾರದ ಆದೇಶ ಸಂಖ್ಯೆ ಇಡಿ 195 ಡಿಜಿಡಿ 2017 ಬೆಂಗಳೂರು ದಿನಾಂಕ:20.03.2018 ರಂತೆ Scanned Copy ಹಾಗೂ ಮರುಮೌಲ್ಯಮಾಪನದ ಶುಲ್ಕವನ್ನು ಪರಿಷ್ಕರಿಸಿ ಆದೇಶಿಸಲಾಗಿದೆ.

### ಶುಲ್ಕಗಳ ವಿವರ

| | | |
|---|---|---|
| Scanned Copy ಗಾಗಿ ಅರ್ಜಿ ಸಲ್ಲಿಸಲು | ಪ್ರತಿ ವಿಷಯಕ್ಕೆ | ರೂ 530/- |
| ಮರುಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಲು | ಪ್ರತಿ ವಿಷಯಕ್ಕೆ | ರೂ 1670/- |
| ಅಂಕಗಳ ಮರು ಎಣಿಕೆಗಾಗಿ | **ಯಾವುದೇ ಶುಲ್ಕ ಇರುವುದಿಲ್ಲ** | |

### ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಸಮಯ / ದಿನಾಂಕ

| ಪ್ರಕ್ರಿಯೆಯ ವಿವರ | ರಿಂದ | ವರೆಗೆ |
|---|---|---|
| Scanned Copy ಗಾಗಿ ಅರ್ಜಿ ಸಲ್ಲಿಸುವ ದಿನಾಂಕ | 16.07.2020 | 30.07.2020 |
| ScannedCopy ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭ-ಕೊನೆಯ ದಿನಾಂಕ | 03.08.2020 | 07.08.2020 |
| ಮರುಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಲು ಹಾಗೂ ಮರುಎಣಿಕೆಗಾಗಿ ಅರ್ಜಿ ಸಲ್ಲಿಸಲು (Scanned ಪ್ರತಿ ತೆಗೆದುಕೊಂಡವರಿಗೆ ಮಾತ್ರ ಅವಕಾಶವಿರುತ್ತದೆ). | 04.08.2020 | 10.08.2020 |

M. Kaly

## Answer Paper Scanned Copy ಪಡೆಯಲು ಅರ್ಜಿ ಸಲ್ಲಿಸುವ ವಿಧಾನ

1. ಇಲಾಖೆಯ ವೆಬ್‌ಸೈಟ್ pue.kar.nic.in ರಲ್ಲಿನ HOME ಪೇಜ್‌ನಲ್ಲಿ Link (Application for Scanned copies, Re-valuation, Re-totalling March 2020) ಎಂದು ಇರುತ್ತದೆ.
2. Link ಕ್ಲಿಕ್ **ಮಾಡಿದರೆ** Calendar of Events **ಪುಟ ತೆರೆಯುತ್ತದೆ. ಇದರಲ್ಲಿ** "How to Apply" **ಇದನ್ನು ಕಡ್ಡಾಯವಾಗಿ ಪೂರ್ಣವಾಗಿ ಗಮನಿಸಬೇಕು.**
3. ಇದರಲ್ಲಿ ದ್ವಿತೀಯ ಪಿಯುಸಿ ಮಾರ್ಚ್–2020ರ ವಾರ್ಷಿಕ ಪರೀಕ್ಷೆಯ ನೋಂದಣಿ ಸಂಖ್ಯೆ (Register Number)ನ್ನು ಪ್ರವೇಶ ಪತ್ರದಲ್ಲಿರುವಂತೆ ನಮೂದಿಸಬೇಕು. ತಕ್ಷಣವೇ ವಿದ್ಯಾರ್ಥಿಗಳ ಮಾಹಿತಿ display ಆಗುತ್ತದೆ.
4. Answer Paper Scanned Copy ಪಡೆಯಲು ಇಚ್ಚಿಸಿದ ವಿಷಯ/ವಿಷಯಗಳನ್ನು **ಒಂದೇ ಬಾರಿಗೆ** ಆಯ್ಕೆ ಮಾಡಿಕೊಂಡು **ವಿದ್ಯಾರ್ಥಿಯ/ಪೋಷಕರ ನಿಖರವಾದ ಮೊಬೈಲ್ ಸಂಖ್ಯೆ, ತಮ್ಮ ಖಾಸಗಿ ಇ–ಮೇಲ್ ಐಡಿ** (Email Id) **ಹಾಗೂ ಸ್ವವಿಳಾಸಗಳನ್ನು** ಮಾತ್ರ ನಮೂದಿಸಬೇಕು. ನಂತರ Submit ಬಟನ್ ಕ್ಲಿಕ್ ಮಾಡಬೇಕು. ನಂತರ ಚಲನ್ ಸಂಖ್ಯೆಯು Auto Generate ಆಗುತ್ತದೆ
5. "Make Payment" ಬಟನ್ ಕ್ಲಿಕ್ ಮಾಡಬೇಕು, ಇಲ್ಲಿ "cash payment" ಅಥವಾ "online payment" ಆಯ್ಕೆ ಮಾಡಿಕೊಳ್ಳಬೇಕು.

**<u>Cash payment ಆಯ್ಕೆ ಮಾಡಿಕೊಂಡರೆ :</u>**

- **ಬ್ಯಾಂಕ್: CORPORATION BANK(UNION BANK OF INDIA)/VIJAYA BANK(BANK OF BARODA)** ಹಾಗೂ **BENGALURU-ONE/ KARNATAKA-ONE,** ಆಯ್ಕೆಮಾಡಿಕೊಳ್ಳಿ.
- "Generate Challan" ಬಟನ್ ಕ್ಲಿಕ್ ಮಾಡಬೇಕು.
- **ಚಲನ್‌ನಲ್ಲಿ ತಾವು ದಾಖಲಿಸಿದ ಮಾಹಿತಿ** display ಆಗುತ್ತದೆ. ನಂತರ ಚಲನ್ ಪ್ರಿಂಟ್ ತಗೆದುಕೊಳ್ಳುವುದು.
- **ಆಯ್ಕೆಮಾಡಿದ ಬ್ಯಾಂಕ್‌ನ** ಚಲನ್ ಪ್ರಿಂಟ್ ತಗೆದುಕೊಂಡ ನಂತರ ಚಲನ್ ಮುಖಾಂತರ ಹಣ ಸಂದಾಯ ಮಾಡುವುದು.
- **<u>Cash Payment</u> ಮುಖಾಂತರ ಹಣ ಸಂದಾಯ ಮಾಡಿದ 3 ರಿಂದ 4 ಗಂಟೆಗಳ ನಂತರ ತಾವು ನಮೂದಿಸುವ ಮೊಬೈಲ್ ಸಂಖ್ಯೆಗೆ SMS ಸಂದೇಶ ಬರುತ್ತದೆ.**

**<u>Online Payment ಆಯ್ಕೆ ಮಾಡಿಕೊಂಡರೆ</u>**

- Karnataka-one ಬಟನ್ ಕ್ಲಿಕ್ ಮಾಡಬೇಕು.
- **ತಾವು ದಾಖಲಿಸಿದ ಮಾಹಿತಿ** display ಆಗುತ್ತದೆ.
- "Pay Now" ಬಟನ್ ಕ್ಲಿಕ್ ಮಾಡಬೇಕು
- Karnataka-one **ಪುಟದಲ್ಲಿ** Continue for Payment **ಆಯ್ಕೆಮಾಡಿ.**
- ಇದರಲ್ಲಿ "Terms and Conditions" **ಕಡ್ಡಾಯವಾಗಿ ಓದಿ** "Check box" ಕ್ಲಿಕ್ ಮಾಡಿ.
- "Continue for payment" ಕ್ಲಿಕ್ ಮಾಡಿ.
- **ನಂತರ** "Pay now" ಕ್ಲಿಕ್ ಮಾಡಿ.
- "Processing" **ಆಗುವವರೆಗೆ** "Back button" / "Close button" **ಅಥವಾ** "Refresh button" **<u>ಒತ್ತಬೇಡಿ.</u>**
- "Cash Payment" **ಅಥವಾ** "On-line payment" **ಮುಖಾಂತರ ಹಣ ಸಂದಾಯ ಮಾಡಿದ ನಂತರ ತಾವು ನಮೂದಿಸಿದ ಮೊಬೈಲ್ ಸಂಖ್ಯೆಗೆ** sms **ಸಂದೇಶ ಬರುತ್ತದೆ.**
- **sms ಸಂದೇಶ ಬಾರದಿದ್ದಲ್ಲಿ ಹಣ ಸಂದಾಯಿಸಿದ ಬ್ಯಾಂಕ್ B-one, K-oneನ್ನು ಕೂಡಲೇ ಸಂಪರ್ಕಿಸಿ.**

6. Scanned Copy ಗೆ Apply ಮಾಡಿದ ಕೂಡಲೇ Challan Generate ಆಗುತ್ತದೆ. ವಿದ್ಯಾರ್ಥಿಯು ಅದೇ ಚಲನ್ ಸಂಖ್ಯೆಯನ್ನು ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಉಪಯೋಗಿಸುವಂತಿಲ್ಲ. ಮರುಮೌಲ್ಯಮಾಪನಕ್ಕೆ ಪ್ರತ್ಯೇಕ Challan Generate ಮಾಡಿಕೊಳ್ಳಬೇಕು.

7. Scanned Copy ಗೆ ಮತ್ತು ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವಾಗ ವಿದ್ಯಾರ್ಥಿಗಳು / ಪೋಷಕರು ಅವರ ಚಾಲ್ತಿಯಲ್ಲಿರುವ ಮೊಬೈಲ್ ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು. ಇಲಾಖೆಯು ಅದೇ ದೂರವಾಣಿ ಸಂಖ್ಯೆಗೆ OTP (One Time Password) ಕಳುಹಿಸುತ್ತದೆ. ಇದಲ್ಲದೆ ಸದರಿ ದೂರವಾಣಿ ಸಂಖ್ಯೆಯು ಈ ಪ್ರಕ್ರಿಯೆ ಮುಕ್ತಾಯವಾಗುವವರೆಗೆ ಚಾಲನೆಯಲ್ಲಿರತಕ್ಕದ್ದು.

8. ವಿದ್ಯಾರ್ಥಿಯ ಪ್ರತಿ ಮತ್ತು ಬ್ಯಾಂಕ್ ಪ್ರತಿಗಳನ್ನೊಂಡ ಎರಡು ಭಾಗಗಳಿರುವ ಚಲನ್ ಡೌನ್‌ಲೋಡ್ ಮಾಡಿಕೊಂಡು ನಿಗದಿಪಡಿಸಿರುವ ಶುಲ್ಕವನ್ನು ಆಯ್ಕೆ ಮಾಡಿಕೊಂಡಿರುವ ಬ್ಯಾಂಕ್ ಮುಖಾಂತರ ಪಾವತಿ ಮಾಡಬೇಕು. (Challan ಸಂಖ್ಯೆಯನ್ನು ಮುಂದಿನ ಎಲ್ಲಾ ಪ್ರಕ್ರಿಯೆಗಳಿಗೂ ಬಳಸಿಕೊಳ್ಳಬೇಕಾಗಿರುವುದರಿಂದ ಅಭ್ಯರ್ಥಿಗಳು ಈ ಸಂಖ್ಯೆಯನ್ನು ಗಮನದಲ್ಲಿಟ್ಟುಕೊಳ್ಳುವುದು)

9. **Scanned ಉತ್ತರಪತ್ರಿಕೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ UPLOAD ಮಾಡಿದ ಕೂಡಲೇ ವಿದ್ಯಾರ್ಥಿಯು ಒದಗಿಸಿರುವ ಮೊಬೈಲ್ ಸಂಖ್ಯೆಗೆ ಸಂದೇಶ ರವಾನೆಯಾಗುತ್ತದೆ.**

10. Scanned ಉತ್ತರ ಪತ್ರಿಕೆಯ UPLOAD ಮಾಡಲಾದ ಮಾಹಿತಿ ಇಲಾಖಾ ವೆಬ್‌ಸೈಟ್‌ನಲ್ಲಿ ಸಹ ಲಭ್ಯವಿರುತ್ತದೆ.

11. ಸಂದೇಶ ಸ್ವೀಕರಿಸಿದ ವಿದ್ಯಾರ್ಥಿಗಳು ಈ ಮೊದಲೇ ನೀಡಲಾದ ಚಲನ್ ಸಂಖ್ಯೆಯನ್ನು ಬಳಸಿ Answer Paper ನ Scanned Copy ಯನ್ನು ನಿಗದಿಪಡಿಸಲಾದ ದಿನಾಂಕದೊಳಗೆ ಡೌನ್-ಲೋಡ್ ಮಾಡಿಕೊಳ್ಳಬೇಕು.

12. **Answer Paper ನ Scanned Copy ಯನ್ನು Download ಮಾಡಿಕೊಳ್ಳಲು ಅನುಸರಿಸಬೇಕಾದ ಕ್ರಮಗಳು:-**

- Scanned Copy ಗಾಗಿ ಶುಲ್ಕ ಪಾವತಿಸಿರುವ ಚಲನ್ ಸಂಖ್ಯೆಯನ್ನು Enter ಮಾಡಬೇಕು
- ನಂತರ ವಿದ್ಯಾರ್ಥಿಯ ನೋಂದಣಿ ಸಂಖ್ಯೆ ಮತ್ತು ಶುಲ್ಕ ಪಾವತಿಸಿರುವ ವಿಷಯಗಳು Display ಆಗುತ್ತವೆ. ಬೇಕಾದ ಭಾಷೆ / ವಿಷಯವನ್ನು (Subject) ಆಯ್ಕೆ ಮಾಡಿಕೊಳ್ಳಬೇಕು.
- OTP ನಂತರ ಕ್ಯಾಪ್ಚಾ (Captcha) Code Enter ಮಾಡಿ Submit ಮಾಡಬೇಕು.
- Submit ಮಾಡಿದ ನಂತರ ನೀವು Scanned copyಗೆ Apply ಮಾಡುವಾಗ ನೀಡಿರುವ ಮೊಬೈಲ್ ಸಂಖ್ಯೆಗೆ OTP ಕಳುಹಿಸಲಾಗುವುದು.
- ಸದರಿ ಸಂಖ್ಯೆಯನ್ನೇ ಬಳಸಿ Scanned Copy **ಯನ್ನು** Download **ಮಾಡಿಕೊಳ್ಳಬೇಕು.**
- Scanned Copy ಗೆ Apply ಮಾಡುವಾಗ ಚಾಲನೆಯಲ್ಲಿರುವ ಮೊಬೈಲ್ ದೂರವಾಣಿ ಸಂಖ್ಯೆಯನ್ನು ಮಾತ್ರ ಉಪಯೋಗಿಸತಕ್ಕದ್ದು.

**ಅಂಕಗಳ ಮರು ಎಣಿಕೆ ಹಾಗೂ ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನಕ್ಕಾಗಿ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ:10.08.2020.**

**II. ಮರು ಎಣಿಕೆಗಾಗಿ (Re-totalling) ಅರ್ಜಿ ಸಲ್ಲಿಸಲು ಅನುಸರಿಸಬೇಕಾದ ಕ್ರಮಗಳು:-**

1. Answer Paper Scanned Copy ಯನ್ನು ಪಡೆದುಕೊಂಡು ಪರಿಶೀಲಿಸಿದ ನಂತರ ಅಂಕಗಳ ಎಣಿಕೆಯಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಮಾತ್ರ ಮರು ಎಣಿಕೆಗಾಗಿ (Re-totalling) ಅರ್ಜಿ ಸಲ್ಲಿಸಬೇಕು
2. Re-totalling ಗೆ ಅರ್ಜಿ ಸಲ್ಲಿಸಲು ಶುಲ್ಕ ಪಾವತಿಸುವಂತಿಲ್ಲ.
3. Answer Paper Scanned Copy ಪಡೆಯಲು ಅನುಸರಿಸಿದ ಕ್ರಮವನ್ನೇ ಮರುಮೌಲ್ಯಮಾಪನಕ್ಕೂ ಅನುಸರಿಸುವುದು. ಆದರೆ ಮರುಎಣಿಕೆಗೆ ಚಲನ್ ಡೌನ್‌ಲೋಡ್ ಮಾಡುವ ಅವಶ್ಯಕತೆ ಇರುವುದಿಲ್ಲ. ಮುಂದಿನ ಉಪಯೋಗಕ್ಕಾಗಿ ಮತ್ತು ವಿದ್ಯಾರ್ಥಿಯ ಮಾಹಿತಿಗಾಗಿ ಚಲನ್ ಸಂಖ್ಯೆಯನ್ನು ವಿದ್ಯಾರ್ಥಿಯು ಒದಗಿಸಿದ ಮೊಬೈಲ್ ದೂರವಾಣಿ ಸಂಖ್ಯೆಗೆ ಎಸ್‌ಎಂಎಸ್ ಮೂಲಕ ಕಳುಹಿಸಲಾಗುವುದು.
4. ಮರುಎಣಿಕೆ ಫಲಿತಾಂಶವನ್ನು ಅಂತರ್ಜಾಲದಲ್ಲಿ ಪ್ರಕಟಿಸಲಾಗುವುದು.
5. **ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿರುವವರು ಮರು ಎಣಿಕೆಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.**

ಸ- ಸಹಿ

III. **ಮರು ಮೌಲ್ಯಮಾಪನಕ್ಕಾಗಿ (Re-valuation) ಅರ್ಜಿ ಸಲ್ಲಿಸಲು ಅನುಸರಿಸಬೇಕಾದ ಕ್ರಮಗಳು :–**

1. Answer Paper Scanned Copy ಯನ್ನು ಪಡೆದುಕೊಂಡು ಪರಿಶೀಲಿಸಿದ ನಂತರವೇ ಮರು ಮೌಲ್ಯಮಾಪನಕ್ಕಾಗಿ (Re-valuation) ಅರ್ಜಿ ಸಲ್ಲಿಸಬೇಕು.
2. ಮರುಮೌಲ್ಯಮಾಪನದಲ್ಲಿ ನಿಗದಿಪಡಿಸಿರುವ ಅಂಕಗಳಿಗಿಂತ ಹೆಚ್ಚಿನ ಅಂಕಗಳು ಅಥವಾ ಕಡಿಮೆ ಅಂಕಗಳು (–/+6%) ಬಂದಲ್ಲಿ, ಬದಲಾವಣೆಯಾದ ಅಂಕಗಳೊಂದಿಗೆ ಫಲಿತಾಂಶವನ್ನು ಪರಿಷ್ಕರಿಸಿ ಪ್ರಕಟಿಸಲಾಗುವುದು. Karnataka Pre-University Course S.L.P.E. Rule-1997, 29 (ಅ) **ಅನ್ವಯ ಯಾವುದೇ** ಕಾರಣಕ್ಕೂ ವಿದ್ಯಾರ್ಥಿಗೆ ಈ ಮೊದಲು ಪಡೆದ ಅಂಕಗಳನ್ನು ಮರುಸ್ಥಾಪಿಸಲು ಅವಕಾಶವಿರುವುದಿಲ್ಲ.
3. ಮರುಮೌಲ್ಯಮಾಪನದಲ್ಲಿ (–/+6%) ಅಂಕಗಳಿಗಿಂತ ಕಡಿಮೆ ಅಂಕಗಳು ಬಂದಲ್ಲಿ ಸದರಿ ಅಂಕಗಳನ್ನು ಪರಿಗಣಿಸುವುದಿಲ್ಲ ಹಾಗೂ ಫಲಿತಾಂಶದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.
4. **ಮರು ಮೌಲ್ಯಮಾಪನದ ಬಗ್ಗೆ ಮರು ಮೌಲ್ಯಮಾಪಕರು ತೆಗೆದುಕೊಂಡ ನಿರ್ಧಾರವೇ ಅಂತಿಮವಾಗಿದ್ದು, ಇದರ ಮೇಲೆ ಮರು ಪರಿಶೀಲನೆ ಅಥವಾ ಮೇಲ್ಮನವಿ ಸಲ್ಲಿಸಲು ಅವಕಾಶ ಇರುವುದಿಲ್ಲ.**
5. Answer Paper Scanned Copy ಪಡೆಯಲು ಅನುಸರಿಸಿದ ಕ್ರಮವನ್ನೇ ಮರುಮೌಲ್ಯಮಾಪನಕ್ಕೂ (Re-valuation) ಅನುಸರಿಸುವುದು.
6. ಮರು ಮೌಲ್ಯಮಾಪನ / ಮರುಎಣಿಕೆ ಕಾರ್ಯ ಮುಗಿದ ನಂತರ ಫಲಿತಾಂಶವನ್ನು ಇಲಾಖೆಯ website pue.kar.nic.inನ ಅಂತರ್ಜಾಲದಲ್ಲಿ ಪ್ರಕಟಿಸಲಾಗುವುದು.
7. ಮರು ಮೌಲ್ಯಮಾಪನ / ಮರು ಎಣಿಕೆಗೆ ಅರ್ಜಿ ಸಲ್ಲಿಸಿರುವ ಅನುತ್ತೀರ್ಣ ವಿದ್ಯಾರ್ಥಿಗಳು 2020ರ ಪೂರಕ ಪರೀಕ್ಷೆ ಶುಲ್ಕವನ್ನು ನಿಗಧಿತ ದಿನಾಂಕ:31.07.2020 ರೊಳಗಾಗಿ ಪಾವತಿಸುವುದು.
8. ಮಾರ್ಚ್ 2020ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಮೌಲ್ಯಮಾಪನಗೊಂಡ ಉತ್ತರ ಪತ್ರಿಕೆಗಳ Scanned Copy ಪಡೆಯಲು ಮರು ಮೌಲ್ಯಮಾಪನ ಮತ್ತು ಮರುಎಣಿಕೆಗಾಗಿ ಅರ್ಜಿ ಸಲ್ಲಿಸುವ ಬಗ್ಗೆ ಇಲಾಖಾ website pue.kar.nic.inನ ಅಂತರ್ಜಾಲದಲ್ಲಿ ವಿವರವಾದ ಸುತ್ತೋಲೆಯನ್ನು ಪ್ರಕಟಿಸಲಾಗಿದೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಕ್ರಮಕ್ಕಾಗಿ:**

1. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರಿಗೆ.
2. ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರಿಗೆ.
   (ವಿದ್ಯಾರ್ಥಿಗಳಿಗೆ ಈ ಕುರಿತು ಸೂಕ್ತ ನಿರ್ದೇಶನ ನೀಡಲು)
3. ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ.
4. ಸಹಾಯಕ ನಿರ್ದೇಶಕರು, ಗಣಕಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ ರವರಿಗೆ.
5. ಸಹಾಯಕ ನಿರ್ದೇಶಕರು, ಇ–ಆಡಳಿತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ ರವರಿಗೆ.
   (ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲು).

**ಪ್ರತಿಯನ್ನು ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.**

**1.**ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ, ಸದರಿ ಮಾಹಿತಿಯನ್ನು ಮಾನ್ಯ ಸಚಿವರ ಅವಗಾಹನೆಗೆ ತರಲು ಕೋರಿದೆ.

2.ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಇವರಿಗೆ ಮಾಹಿತಿಗಾಗಿ.

**ಪ್ರತಿಗಳು,**

1.ಜಂಟಿ ನಿರ್ದೇಶಕರು(ಪರೀಕ್ಷೆ), ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂ.

2.ಕಛೇರಿ ಪ್ರತಿ.